# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು

## ವಿಶೇಷ ಪ್ರಕರಣ ಸಂಖ್ಯೆಃ 01/2016

ಪ್ರಾ.ಸಾ.- 25
ಚಾ.ಸಾ.- 27

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಆನಂದ ಎ ಕಾತ್ಕೆ |
| ತಂದೆಯ ಹೆಸರು | ಃ | ಅರುಣ ಕಾತ್ಕೆ |
| ವಯಸ್ಸು | ಃ | 56 ವರ್ಷ |
| ಉದ್ಯೋಗ | ಃ | ಮ್ಯಾನೇಜರ್ ಪ್ರೊಸೆಸಿಂಗ್ , ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬೆಂಗಳೂರು |
| ವಾಸ ಸ್ಥಳ | ಃ | ಬೆಂಗಳೂರು |

ಪ್ರಮಾಣ ವಚನದ ನಂತರ, ದಿನಾಂಕಃ 29-10-2018

**ಃ ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಪಿ.ಪಿ. ಯವರಿಂದಃ**

1. ನಾನು 31 ಜುಲೈ 2014 ರಿಂದ 30 ಸೆಪ್ಟೆಂಬರ್ 2016 ರವರೆಗೆ ಬ್ರಾಂಚ್ ಮ್ಯಾನೇಜರ್ ಆಗಿ ವಿವಿ ಪುರಂ , ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬೆಂಗಳೂರು ಇಲ್ಲಿ ಕೆಲಸ ನಿರ್ವಹಿಸುತ್ತಿದ್ದೆ.

2. ದಿನಾಂಕಃ08-04-2014 ರಂದು ಲೋಕಾಯುಕ್ತ ಕಛೇರಿಯವರು ಎರಡು ಡಿ.ಡಿ. ಗಳ ಬಗ್ಗೆ ಮಾಹಿತಿ ಕೇಳಿದ್ದರು. ನಾನು ಅವರಿಗೆ ಆ ಡಿ.ಡಿ.ಗಳನ್ನು ಕೊಟ್ಟ ತಾರೀಖು ಮತ್ತು ಅವುಗಳ ಬಗ್ಗೆ ವಿವರವನ್ನು ದಿನಾಂಕಃ13-11-2014 ರಂದು ಪತ್ರ ಮುಖೇನ ಕಳುಹಿಸಿದೆನು. ಅದರ ಜೊತೆಗೆ ಡಿ.ಡಿ.ಯ 2 ಚಲನ್ ಕಾಪಿಗಳನ್ನು ಕೂಡಾ ಲಗತ್ತಿಸಿದ್ದೆ. ಈಗ ತೋರಿಸಿದ ಪತ್ರ ಅದೇ ಆಗಿದ್ದು ಅದಕ್ಕೆ ನನ್ನ ಸಹಿ ಇರುತ್ತದೆ. ಆ ಪತ್ರವನ್ನು ನಿಶಾನೆ ಪಿ- 69 ಎಂದು, ಸಾಕ್ಷಿಯ

ಸಹಿಯನ್ನು ನಿಶಾನೆ ಪಿ- 69(ಎ) ಎಂದು ಗುರುತಿಸಲಾಯಿತು. ಅದರ ಜೊತೆ ಲಗತ್ತಿರುವ ಡಿ.ಡಿ. ಚಲನ್ ಗಳನ್ನು ನಿಪಿ.69(ಬಿ) ಮತ್ತು ನಿಪಿ.69(ಸಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಃ ಶ್ರೀ ಕೆ.ಎಸ್.ಎಸ್.ಪಿ. ವಕೀಲರಿಂದಃ**

3. ಆ ಎರಡೂ ಡಿ.ಡಿ. ಗಳ್ನು ಹನುಮಂತಗೌಡ ಪಾಟೀಲ್ ಇವರ ಖಾತೆಯ ನಂಃ 30009003838 ಈ ಖಾತೆಯಿಂದ ಹಣವನ್ನು ಡೆಬಿಟ್ ಮಾಡಿ ಆ ಡಿ.ಡಿ. ಗಳನ್ನು ಕೊಡಲಾಗಿದೆ.

4. ಆರೋಪಿ ಚೆನ್ನಬಸಪ್ಪರವರಿಗೂ ಈ ಡಿ.ಡಿ. ಗಳಿಗೂ ಸಂಬಂಧವಿರುವುದಿಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

**ಓ.ಹೇ.ಕೇ.ಸ.ಇ.ಎ.ಒ.**
Sd/-29-10-2019
**(ಪಿ.ಎನ್.ದೇಸಾಯಿ)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಿಕ್ಕಮಗಳೂರು.**

***CCK***